**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,**
**ದಕ್ಷಿಣ ಕನ್ನಡ, ಮಂಗಳೂರು.**

**ಸೆಷನ್ಸ್ ಕೇಸ್ ನಂಬ್ರ 153/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಹನೀಫ್ | ಪ್ರಾಸಾಃ 10 |
| ತಂದೆಯ ಹೆಸರು | : | ಅಹಮ್ಮದ್ | ಚಾಸಾಃ 12 |
| ಪ್ರಾಯ | : | 50 ವರ್ಷ | **ದಿನಾಂಕಃ 07-08-2025** ರಂದು ಸಾಕ್ಷಿದಾರರಿಗೆ ಪ್ರಮಾಣವಚನ ಬೋಧಿಸಲಾಯಿತು. |
| ಉದ್ಯೋಗ | : | ಪೈಂಟಿಂಗ್ | |
| ವಾಸಸ್ಥಳ | : | ಸುವರ್ಣ ನಗರ, ಕರಿಂಜೆ ಗ್ರಾಮ, ಮೂಡಬಿದ್ರೆ ತಾಲೂಕು | |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನನಗೆ ಚಾಸಾ-11 ರವರ ಪರಿಚಯ ಇರುತ್ತದೆ, ಅವರು ನಮ್ಮ ಊರಿನವರು. ಸುಮಾರು 4-5 ವರ್ಷಗಳ ಹಿಂದೆ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಚಾಸಾ-4 ರವರ ಮನೆಯ ಬಳಿ ಪೋಲಿಸರು ಕರೆತಂದಾಗ ನೋಡಿರುತ್ತೇನೆ, ಯಾವ ವಿಷಯಕ್ಕೆ ಅವರನ್ನು ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆ ಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ-22 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-22(ಬಿ)** ಎಂದು ಗುರುತಿಸಲಾಯಿತು. ನಿಪಿ-22 ಕ್ಕೆ ಸಹಿಯನ್ನು ಚಾಸಾ-4 ರವರ ಮನೆಯಲ್ಲಿ ಹಾಕಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ.

2. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆ ಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ-23 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-23(ಬಿ)**

ಎಂದು ಗುರುತಿಸಲಾಯಿತು. ನಿಪಿ-23 ಕ್ಕೆ ಸಹಿಯನ್ನು ಚಾಸಾ-4 ರವರ ಮನೆಯಲ್ಲಿ ಹಾಕಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ಸಹಿಯನ್ನು ಒಪ್ಪಿಕೊಂಡಿದ್ದು, ಸದರಿ ದಾಖಲೆ ಮಹಜರು ಆಗಿದ್ದು ಅದನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ-24(ಬಿ)** ಎಂದು ಗುರುತಿಸಲಾಯಿತು. ನಿಪಿ-24 ಕ್ಕೆ ಸಹಿಯನ್ನು ಚಾಸಾ-4 ರವರ ಮನೆಯಲ್ಲಿ ಹಾಕಿರುತ್ತೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-22 ರಿಂದ 24 ಕ್ಕೆ ಸಹಿ ಹಾಕುವ ಸಮಯದಲ್ಲಿ 1ನೇ ಆರೋಪಿ ಇದ್ದರು.

3. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ವತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಸಾಕ್ಷಿಗೆ ಎಂ.ಒ-1 ನ್ನು ತೋರಿಸಲಾಗಿ, ಸದರಿ ಸ್ವತ್ತನ್ನು ಈ ಹಿಂದೆ ನಾನು ನೋಡಿರುವುದಿಲ್ಲ, ಆದರೆ ಸದರಿ ಸ್ವತ್ತಿನ ಮೇಲೆ ಅಂಟಿಸಿರುವ ಚೀಟಿಯ ಮೇಲಿರುವ ಅವರ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ಸಾಕ್ಷಿಯ ಸಹಿಯನ್ನು **ಎಂ.ಒ-1(ಬಿ)** ಎಂದು ಗುರುತಿಸಲಾಯಿತು. ಎಂ.ಒ-1(ಬಿ) ರ ಸಹಿಯನ್ನು ಚಾಸಾ-4 ರವರ ಮನೆಯಲ್ಲಿ ಹಾಕಿರುತ್ತೇನೆ. ಆರೋಪಿ ಎಂ.ಒ-1 ನ್ನು ಹಾಜರುಪಡಿಸಿದ ಸಮಯದಲ್ಲಿ ತೆಗೆದ ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೋಟೋಗಳನ್ನು ಈಗಾಗಲೇ ನಿಪಿ-25(4) ಎಂದು ಗುರುತಿಸಲಾಗಿರುತ್ತದೆ. ಆರೋಪಿ ಆಡುಗಳನ್ನು ಕಳುವು ಮಾಡಿ ಸ್ಥಳ ತೋರಿಸಿದ ಸಮಯದಲ್ಲಿ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸದರಿ ಪೋಟೋವನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿರುತ್ತದೆ.

4. ಸಾಕ್ಷಿ ನಿಪಿ-25(4), ನಿಪಿ-26 ಮತ್ತು ನಿಪಿ-5 ರ ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸುತ್ತಾರೆ. ನಿಪಿ-5 ರ ಫೋಟೋವನ್ನು ಚಾಸಾ-4 ರವರ ಮನೆಯಲ್ಲಿ ಆಡು ಕದ್ದ ಜಾಗದಲ್ಲಿ ತೆಗೆಯಲಾಗಿರುತ್ತದೆ. ನಿಪಿ-25(4) ನ್ನು ಚಾಸಾ-4 ರವರ ಮನೆಯ ಬಳಿ ತೆಗೆಯಲಾಗಿರುತ್ತದೆ ಮತ್ತು ನಿಪಿ-26 ನ್ನು ಫ್ಯಾಕ್ಟರಿಯ ಬಳಿ ತೆಗೆಯಲಾಗಿರುತ್ತದೆ. ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ನ್ಯಾಯಾಲಯದ ಮುಂದಿರುವ ಕಡತ ಮತ್ತು ಸಾಕ್ಷಿಯ ಹೇಳಿಕೆಗಳನ್ನು ಗಮನಿಸಿ, ಸರಕಾರಿ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ, ಸಾಕ್ಷಿಯನ್ನು ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ. )**

**<u>ಪಾಟೀ ಸವಾಲುಃ ಮಾನ್ಯ ಸರಕಾರಿ ಅಭಿಯೋಜಕರಿಂದಃ</u>**

5. ದಿನಾಂಕ 18.08.2021 ರಂದು ನನ್ನನ್ನು ಮತ್ತು ಚಾಸಾ-11 ರವರನ್ನು ಮೂಡಬಿದ್ರೆ ಠಾಣೆಯ ಪೋಲಿಸ್ ನಿರೀಕ್ಷಕರು ಠಾಣೆಗೆ ಬರಮಾಡಿಸಿ , ಆ ದಿನ ಠಾಣೆಯಲ್ಲಿ ಆರೋಪಿಯನ್ನು ತೋರಿಸಿ ಆತನ ಹೆಸರು ವಿಳಾಸವನ್ನು ತಿಳಿಸಿ , ಆತ ಏನನ್ನು ನುಡಿದು, ಏನನ್ನು ಹಾಜರುಪಡಿಸಿದ್ದು ಆ ಸಮಯ ಪಂಚನಾಮೆಗೆ ಪಂಚಾಯತುದಾರರಾಗಿ ಸಹಕರಿಸಬೇಕೆಂದು ಕೇಳಿಕೊಂಡಿದ್ದು ನಾವು ಒಪ್ಪಿದ ಮೇರೆಗೆ ಆರೋಪಿಯು ಈ ಪ್ರಕರಣದ ತಕ್ಷೀರು ಸ್ಥಳಗಳನ್ನು ಮತ್ತು ತಕ್ಷೀರು ಸಮಯ ಉಪಯೋಗಿಸಿದ ತಲವಾರನ್ನು ತೋರಿಸಿಕೊಡುವುದಾಗಿ ಹೇಳಿದ ಮೇರೆಗೆ ಆರೋಪಿಯ ಮುಖಕ್ಕೆ ಕಪ್ಪು ಬಣ್ಣದ ಮುಖ ಕವಚ ಹಾಕಿ ಇಲಾಖಾ ಜೀಪಿನಲ್ಲಿ ಕುಳ್ಳಿರಿಸಿ ಪೋಲಿಸ್ ಅಧಿಕಾರಿಗಳು ಮತ್ತು ನಾವು ಸಂಜೆ 3.30 ರಿಂದ ಠಾಣೆಯಿಂದಹೊರಟು ಆರೋಪಿ ಹೇಳಿದಂತೆ ಪೊಲಿಸ್ ವಾಹನವನ್ನು ಪ್ರಾಂತ್ಯ

ಗ್ರಾಮದ ಪೇಪರ್ ಮಿಲ್ ಎಂಬಲ್ಲಿರುವ ಹೆಚ್ .ಎಂ ಮಂಜಿಲ್ ಕಂಪೌಂಡು ಬಳಿ ಬಂದು ಹೆಂಚು ಛಾವಣಿ ಇರುವ ಶೆಡ್ ನ್ನು ತೋರಿಸಿ ತಾನು ತನ್ನ ಸಹಚರರೊಂದಿಗೆ ಸೇರಿ ಒಬ್ಬ ವ್ಯಕ್ತಿಗೆ ತಲವಾರನ್ನು ತೋರಿಸಿ ಆಡನ್ನು ಕಳುವು ಮಾಡಿ ತುಂಬಿಸಿಕೊಂಡು ಹೋದ ಜಾಗ ಇದುವೇ ಎಂದು ತೋರಿಸಿಕೊಟ್ಟ ಮೇರೆಗೆ ಪೋಲಿಸರು ನಮ್ಮ ಸಮಕ್ಷಮ ನಿಪಿ-22 ರಂತೆ ಮಹಜರು ಸಂಜೆ 3.45 ರಿಂದ 4.15 ರವರೆಗೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

6. ನಂತರ ಆರೋಪಿಯು ತಾನು ತನ್ನ ಸಹಚರರೊಂದಿಗೆ ಸೇರಿ ಈ ದಿನ ಆಡುಗಳನ್ನು ಕಳುವು ಮಾಡಿದ ಜಾಗವನ್ನು ತೋರಿಸಿಕೊಡುವುದಾಗಿ ತಿಳಿಸಿ ತಾನು ಮುಂದೆ ಕುಳಿತು ಬಂದ ರಸ್ತೆ ಯಲ್ಲಿ ವಾಪಸ್ಸು ಹೋಗುವಂತೆ ಜೀಪು ಚಾಲಕರಲ್ಲಿ ತಿಳಿಸಿ ಅದರಂತೆ ಸಂಜೆ 4.20 ಗಂಟೆಗೆ ಅಲ್ಲಿಂದ ಹೊರಟು ಆರೋಪಿ ತೋರಿಸಿಕೊಟ್ಟಂತೆ ಐಡಿಯಲ್ ಕಂಪನಿಯ ಕಡೆಗೆ ವಾಹನವನ್ನು ಚಾಲನೆ ಮಾಡುವಂತೆ ತಿಳಿಸಿ, ಐಡಿಯಲ್ ಕಂಪನಿಯ ಬಳಿ ಇರುವ ಮೈದಾನಕ್ಕೆ ಬಂದಾಗ ಆರೋಪಿ ಜೀಪನ್ನು ನಿಲ್ಲಿಸುವಂತೆಹೇಳಿದಾಗ, ಅದರಂತೆ ಜೀಪಿನಿಂದ ಇಳಿದು ಸದರಿ ಮೈದಾನವನ್ನು ತೋರಿಸಿ ಇದೇ ಮೈದಾನದಲ್ಲಿ ಮೇಯುತ್ತಿದ್ದ 3 ಆಡುಗಳನ್ನು ಎರಡು ಬಾರಿ ಕಳುವು ಮಾಡಿ ಕ್ವಿಡ್ ಕಾರಿನಲ್ಲಿ ಕೊಂಡುಹೋಗಿರುವುದಾಗಿ ನುಡಿದಿದ್ದು ಸದರಿ ಜಾಗದಲ್ಲಿ ನಿಪಿ-23 ರಂತೆ ಸಂಜೆ 4.30 ರಿಂದ 5.00 ರವರೆಗೆ ಮಹಜರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ.

7. ನಂತರ ಆರೋಪಿಯು ಕೃತ್ಯಕ್ಕೆ ಉಪಯೋಗಿಸಿದ ತಲವಾರನ್ನು ಬಿಸಾಡಿದ ಜಾಗವನ್ನು ತೋರಿಸಿಕೊಡುವುದಾಗಿ ತಿಳಿಸಿದ್ದು ಆರೋಪಿ ಪೋಲಿಸರು

ಮತ್ತು ನಾವು ಇಲಾಖಾ ಜೀಪಿನಲ್ಲಿ ಕುಳಿತು ಸಂಜೆ 5.05 ಗಂಟೆಗೆ ಪೇಪರ್ ಮಿಲ್ ನಿಂದ ಹೊರಟು ಆರೋಪಿ ಕರೆದುಕೊಂಡು ಹೋಗಿ ಮೂಡಬಿದ್ರೆ- ಬಂಟ್ವಾಳ ಸಾರ್ವಜನಿಕ ರಸ್ತೆಯ ಎಡಬಂದಿಯಲ್ಲಿ ವಾಹನವನ್ನು ನಿಲ್ಲಿಸುವಂತೆ ಹೇಳಿದ್ದು ಜೀಪಿನಿಂದ ಇಳಿದು ರಸ್ತೆಯ ಎಡಬದಿಯ ಸ್ವಲ್ಪ ದೂರದಲ್ಲಿ ಹುಡುಕಾಡುತ್ತಾ ಹೋಗಿ ಹಸಿರು ಹುಲ್ಲು ಮತ್ತು ಗಿಡ ಗಂಟಿಗಳಲ್ಲಿ ಮುಚ್ಚಿಕೊಂಡಿದ್ದ ಎಂ.ಒ-1 ರ ತಲವಾರನ್ನುಎತ್ತಿ ಹಾಜರುಪಡಿಸಿದ್ದು ಸದರಿ ಜಾಗದಲ್ಲಿ ತಲವಾರನ್ನು ವಶಪಡಿಸಿಕೊಂಡ ಬಗ್ಗೆ ನಿಪಿ-24 ರಂತೆ ಸಂಜೆ 5.30 ರಿಂದ 6.00 ರವರೆಗೆ ಮಹಜರು ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿ ಅಲ್ಲಗೆಳೆದಿದ್ದು, ಅದನ್ನು **ನಿಪಿ-28** ಎಂದು ಗುರುತಿಸಲಾಯಿತು.

8. ನಿಪಿ-22 ರಿಂದ 24 ರ ಮಹಜರಿನಲ್ಲಿರುವ ಬರೆದ ವಿಷಯಗಳನ್ನು ತಿಳಿದಿದ್ದರೂ ಮತ್ತು ಅದರಲ್ಲಿ ನಮೂದಿಸಿರು ಸ್ಥಳಗಳಲ್ಲಿ ಸಹಿ ಹಾಕಿದ್ದರೂ, ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದ ಇರುವುದಿಲ್ಲ ಎಂದು ನುಡಿದಿರುತ್ತಾರೆ**
**ಮರುವಿಚಾರಣೆಃ** **ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓದಿ ಹೇಳಿ ಕೇಳಿ ಸರಿ ಇದೆ.**

**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ದ.ಕ., ಮಂಗಳೂರು.**